ಒ. ಎಸ್. ನಂ.417/2022

ಪಿಡಬ್ಲೂ-2

ದಿನಾಂಕಃ 09.12.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು :- ಶ್ರೀ. ಪ್ರತಿವಾದಿ ಪರ ವಕೀಲರಿಂದಃ-**

ವಾದಿ ಮತ್ತು ಪ್ರತಿವಾದಿ ಗುಜ್ಜಪ್ಪನಹುಂಡಿ ಗ್ರಾಮದವರು ಎಂದರೆ ಸರಿ. ನಾನು ಕೋಳಗಾಲ ಗ್ರಾಮದಲ್ಲಿ ವಾಸ ಮಾಡುತ್ತಿದ್ದೇನೆ ಎಂದರೆ ಸರಿ. ನಮ್ಮೂರಿಗೂ ಗುಜ್ಜಪನಹುಂಡಿಗೂ 2 ಕಿಲೋ ಮೀಟರ್ ಆಗುತ್ತದೆ. ಸುರೇಶ್ ಎಂಬುವವರು ಪ್ರಕಾಶ್ ಎಂಬುವವರ ವಿರುದ್ಧ ದಾವೆಯನ್ನು ಸಲ್ಲಿಸಿರುತ್ತಾರೆ. ದಾವಾಸ್ತಿ ಸರ್ವೆ ನಂಬರ್ 45/4 ನಾಯಕನಹುಂಡಿ ಗ್ರಾಮದಲ್ಲಿರುತ್ತದೆ. ಪ್ರತಿವಾದಿ 1 ರವರ ತಂದೆಯ ಹೆಸರು ಗೊತ್ತಿಲ್ಲ. ವಾದಿ 1 ರವರು ಮತ್ತು ಪ್ರತಿವಾದಿ 1 ರವರ ನಡುವೆ ಯಾವಾಗ ವಿಭಾಗ ಆಗಿರುತ್ತದೆ ಎಂದು ಗೊತ್ತಿಲ್ಲ. ವಾದಿಗೆ 1 ಎಕರೆ 30 ಗುಂಟೆ ವಿಭಾಗದ ಮುಖಾಂತರ ಬಂದಿರುತ್ತದೆ. ವಾದಿ ಮತ್ತು ಪ್ರತಿವಾದಿ ಪಂಚಾಯಿತಿ ಮೂಲಕ ವಿಭಾಗ ಮಾಡಿಕೊಂಡಿರುವ ವಿಷಯ ಗೊತ್ತಿರುತ್ತದೆ. ಸದರಿ ವಿಭಾಗದಂತೆ ವಾದಿಗೆ 36 ½ ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿ. ವಾದಿ ಮತ್ತು 1 ನೇ ಪ್ರತಿವಾದಿ ಯ ತಾಯಿಗೆ 36 ½ ಗುಂಟೆ ಅಜ್ಜು ಪಾಲು ಜಮೀನು ಅನ್ನು ವಾದಿಯೇ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿ. ವಾದಿ ತಾಯಿ ಮೃತ ಪಟ್ಟ ನಂತರ ಸದರಿ ಅಜ್ಜು ಪಾಲು ಆಸ್ತಿಯನ್ನು ಅವರ ಮಗಳು ರೇಖಾ ಮಣಿ ಅನುಬವಿಸಬೇಕು ಅವರ ನಂತರ ಉಳಿದ 3 ಜನ ಗಂಡು ಮಕ್ಕಳು ಅಂದರೆ 1 ನೇ ಪ್ರತಿವಾದಿ ಮತ್ತು ಇನ್ನೊಬ್ಬ ಮಗ ಸಿಂಗಪ್ಪ ಎಂಬುವರು ವಿಭಾಗ ಮಾಡಿಕೊಳ್ಳಬೇಕು ಎಂದುಸದರಿ ಪಂಚಾಯತ್ ಪಾಲು ಪಾರಿಕತ್ತಿನಲ್ಲಿ ನಮೂದು ಇದೆ ಎಂದರೆ ಸರಿಯಲ್ಲ. ಆ ರೀತಿ ನಮೂದು ಇದ್ದರೂ ಸದರಿ 36 ½ ಗುಂಟೆ ಗುಂಟೆ ಜಮೀನನ್ನು ವಾದಿ ಒಬ್ಬರೇ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಗೊತ್ತಿಲ್ಲ.

1 ನೇ ವಾದಿ ಸು.8 ವರ್ಷಗಳ ಹಿಂದೆ ಬೆಂಗಳೂರಿಗೆ ಹೋಗಿರುತ್ತಾರೆ. 20 ವರ್ಷಗಳ ಹಿಂದೆ ಹೋಗಿರುತ್ತಾರೆ ಎಂದರೆ ಇರಬಹುದು ಎಂದು ನುಡಿಯುತ್ತಾರೆ. ಆ ರೀತಿ ವಾದಿ 1 ರವರು ಬೆಂಗಳೂರಿಗೆ ಹೋದ ನಂತರ ಅವರ ಭಾಗಕ್ಕೆ ಬಂದ 36 ½ ಗುಂಟೆ ಜಮೀನು ಅನ್ನು ಪ್ರತಿವಾದಿ 1 ರವರಿಗೂ ಪ್ರತಿವರ್ಷ ರೂ. 5000/-ಗಳಿಗೆ ಗುತ್ತಿಗೆ ಕೊಟ್ಟಿದ್ದರು ಎಂದರೆ ಗುತ್ತಿಗೆ ಕೊಟ್ಟಿರುವುದು ಗೊತ್ತಿರುತ್ತದೆ ಹಣ ಕೊಟ್ಟಿರುವ ವಿಚಾರ ಗೊತ್ತಿಲ್ಲ ಎಂದು ನುಡಿಯುತ್ತಾರೆ. 1 ನೇ ವಾದಿ ರೂ.1,40,000/- ಹಣವನ್ನು ಪಡೆದು 2013 ರಿಂದ ತನ್ನ ಬಾಗಕ್ಕೆ ಬಂದಿದ್ದ ಆಸ್ತಿಯನ್ನು ಪ್ರತಿವಾದಿ ಗುತ್ತಿಗೆಗೆ ನೀಡಿದ್ದಾರೆ ಎಂದರೆ ಅವರು ಹೋಗಿ ಬಂದು ಮಾಡುತ್ತಾರೆ ಎಂದು ನುಡಿಯುತ್ತಾರೆ. ವಾದಿ ತಂಗಿ ರೇಖಾಮಣಿಗೆ ಸುಮಾರು 10 ವರ್ಷಗಳ ಹಿಂದೆ ಮದುವೆಯಾಗಿರುತ್ತದೆ. ಮದುವೆ ಕರ್ಚಿಗೆ 1 ನೇ ಪ್ರತಿವಾದಿಯೇ ಅವರ ತಾಯಿಗೆ 2 ಲಕ್ಷ ಹಣಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ವಾದಿ 1 ರವರ ತಾಯಿಯ ಭಾಗಕ್ಕೆ 36 ½ ಗುಂಟೆ ಜಮೀನು ಅನ್ನು ಪ್ರತಿವಾದಿ 1 ರವರೇ ನೋಡಿಕೊಳ್ಳುತ್ತಿದ್ದಾರೆ ಎಂದರೆ ಗೊತ್ತಿಲ್ಲ. 1 ನೇ ವಾದಿ ಕ್ರಿ.

ಪ್ರಕರಣದಲ್ಲಿ  ಹಾಜರಾಗುತ್ತಿದ್ದಾರೆ ಎಂದರೆ ಗೊತ್ತಿಲ್ಲ. ಬಸವರಾಜು ರವರಿಗೆ ವಾದಿ ಯಾವಾಗ ಜಿ ಪಿ ಎ ಬರೆದದುಕೊಟ್ಟಿರುತ್ತಾರೆ ಮತ್ತ ವಾದಿ ಯಾವಾಗ ದಾವೆ ಸಲ್ಲಿಸಿರುತ್ತಾರೆ ಎಂದು ಗೊತ್ತಿಲ್ಲ.  ದಾವಾ ಸ್ವತ್ತಿನಲ್ಲಿ ಪ್ರತಿವಾದಿ 1 ರವರೇ ಸ್ವಾಧಿನಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿ ಕುಟುಂಬದಲ್ಲಿ 1995 ರಲ್ಲಿ ಆದ ವಿಭಾಗ ಪತ್ರ ಮತ್ತು 2012-13 ರಲ್ಲಿ ಆದ ಹಣ ಕಾಸಿನ ವ್ಯವಾಹಾರದ ಬಗ್ಗೆ ಗೊತ್ತಿಲ್ಲ ಎಂದರೆ ಸರಿ. ನಾನು ವಾದಿಯ ಸಂಬಂದಿಕ ಎಂದರೆ ಸರಿ. 1 ನೇ ವಾದಿಯ ತಂಗಿ ಪ್ರತಿವಾದಿ 1 ಮತ್ತು ವಾದಿಯ ಮೇಲೆ ಭಾಗಾಂಶ ಕೋರಿ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಸದರಿ ದಾವೆಯನ್ನು ವಾದಿ 1 ಮತ್ತು ಸಿಂಗಪ್ಪ ರವರೇ ಹೇಳಿ 1 ನೇ ಪ್ರತಿವಾದಿ ವಿರುದ್ಧ ಹಾಕಿಸಿರುತ್ತಾರೆ ಎಂದರೆ ಸರಿ. ಪ್ರತಿವಾದಿ 1 ರವರು ದಾವಾ ಸ್ವತ್ತಿಗೆ ತೊಂದರೆ ಕೊಟ್ಟಿರುವುದಿಲ್ಲ ಅವರೇ ಸ್ವಾಧೀನದಲ್ಲಿ ಇರುವುದರಿಂದ ತೊಂದರೆ ಕೊಡುವ ಪ್ರಶ್ನೆ ಉದ್ಭವಿಸುವುದಿದಲ್ಲ ಎಂದರೆ ಸರಿಯಲ್ಲ. ದಾವೆಯ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

**2 ನೇ ಹೆಚ್ಚುವರಿ  ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು,  ಹೆಚ್.ಡಿ. ಕೋಟೆ**